ಇನಾಂ ಇಲಾಖಾ.

ಇಸ್ತಿಹಾರ್‌ನಾಮೆ.

(ನಂಬರು 6) ತಾರೀಖು 16ನೇ ಜೂ೯ ಸ೯ 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಹೊಸಕೋಟೇ ತಾಲ್ಲೂಕಿನಲ್ಲಿ ಇರತಕ್ಕ ಚಿಲ್ಲರೇ ಇನಾಂಗಳ ಬಾಬತು (1300) ಫೈನಲ್ ಟೈಟಲ್ ಡೀಡ್ ಯಾನೆ ಕಾಯಂ ಪಟ್ಟೆಗಳು ಬೆಂಗಳೂರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಬಳಿಗೆ ಬಟವಾ ಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವೆ.

2. ಸದರೀ ತಾಲ್ಲೂಕಿನ ಅಮಲ್‌ದಾರರಿಂದ ಪ್ರತೇಕ ಪ್ರತೇಕ ನೋಟಿಸಗಳು ಬಂದ ಮೇಲೆ ಅವುಗಳನ್ನ ತಗದುಕೊಳ್ಳುವ ಬಗ್ಯೆ ಸದರೀ ಇನಾಂದಾರರು ಏರ್ಪ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್‌ರು ಅಂಥಾ ನೋಟಿಸಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರೀ ಚಿಲ್ಲರೇ ಇನಾಂಗಳ ಬಗ್ಯೆ ಈ ಆಫಿಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ರ‍್ಯಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 4ನೇ ಜೂ೯ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರದ ತಾಲ್ಲೂಕು ಗ್ರಾಮಾಂತ್ರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿಸಂವತ್ಸರದ ಬಾಬನ್ನು, 1896ನೇ ಇಸವಿ ಜುಲೈ 6ನೇ ತಾರೀಖಿನಲ್ಲಿ ಹರಾಜ್ ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಛೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರ್‌ರು ಅಥವಾ ಶಿರಸ್ತೇದಾರ್‌ರು ಮಾಡಿಸುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಖಾಗಾಯತು ಬಂದು ವರುಷದ ವರಿವಿಗೆ ಇರತಕ್ಕದ್ದು.

(4.) ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನ ಹಾಜರ್‌ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಕೈಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್‌ಮಾಡಬೇಕು. ಬಾಕಿ ಮೊಬಲಗನ್ನ ರೂಪಾಯಿ 1ಕ್ಕೆ 1 ಆಣೇ ಮೇರೆ ಲೋಕಲ್‌ಸೆಸ್ ಸಹಿತ ಹರಾಜ್ ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನೆ ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮೀಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್‌ರ ಹಕ್ಕಿಗೆ ಆಟಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಲಿ ಜಮೀರ್ಗಳನ್ನ ಇಜಾರೆದಾರನು ಅಗಿಯಕೂಡದು. ಬಂದು ವೇಳೆ ಆಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪ್ಯು ಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಶೀಲ್ ಕಂಡು ತಾಲ್ಲೂಕು ಅಮಲ್‌ದಾರ್‌ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರ್‌ರು ಸಾಗಿಸಕೂಡದು.

ವಿ. ಎಸ್. ನರಸುಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.